## ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1824 (2089)

2) ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 30.03.2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಲ್ಲಿ ಕಾಡುಪ್ರಾಣಿಗಳ ದಾಳಿಗೊಳಗಾಗಿ ಮೃತರಾದವರ ಸಂಖ್ಯೆ ಎಷ್ಟು; ಯಾವ ಪ್ರಾಣಿಗಳಿಂದ ದಾಳಿಗೊಳಗಾಗಿ ಮೃತರಾಗಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು); | ಕಳೆದ 3 ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣ ಮತ್ತು ಪಾವತಿಸಲಾದ ದಯಾತ್ಮಕ ಧನದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| (ಆ) | ಕಾಡುಪ್ರಾಣಿ ಮತ್ತು ಮಾನವ ಸಂಘರ್ಷವನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಕಾಡುಪ್ರಾಣಿಗಳ ದಾಳಿಯಿಂದ ಮೃತರಾದವರಿಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ; | ಮಾನವ-ವನ್ಯಪ್ರಾಣಿ ಸಂಘರ್ಷ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ, ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿದೆ. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.<br>2. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಲ್ಲಿ ರೂ. 5.00 ಕೋಟಿ ವೆಚ್ಚದಲ್ಲಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳ ನಿರ್ಮೂಲನೆ ಎಂಬ ಹೊಸ ಕಾರ್ಯಕ್ರಮ / ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.<br>3. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ 2016-17 ರಿಂದ 2018-19 ನೇ ಸಾಲಿನಲ್ಲಿ 961.9 ಕಿ.ಮೀ. ಆನೆಗಳಿರುವ ಪ್ರದೇಶಗಳಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮತ್ತು ನಿರ್ವಹಣೆ ಮಾಡಲಾಗಿದ್ದು, 2019-20ನೇ ಸಾಲಿನಲ್ಲಿ 115 ಕಿ.ಮೀ. ಸೌರಶಕ್ತಿ ಬೇಲಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.<br>4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ 2016-17 ರಿಂದ 2018-19 ನೇ ಸಾಲಿನಲ್ಲಿ 443.03 ಕಿ.ಮೀ. ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು, 2019-20ನೇ ಸಾಲಿನಲ್ಲಿ 106 ಕಿ.ಮೀ. ಆನೆತಡೆ ಕಂದಕ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.<br>5. ಕಾಡಾನೆ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು 2016-17 ರಿಂದ 2018-19 ನೇ ಸಾಲಿನಲ್ಲಿ 82.50 ಕಿ.ಮೀ ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 2019-20ನೇ ಸಾಲಿನಲ್ಲಿ 118 ಕಿ.ಮೀ. ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| | | 6. ಕಾಡಾನೆ ಹಿಮ್ಮೆಟ್ಟಿಸುವ ತಂಡ (Anti Depredation Camp) ಹಾಗೂ ಕ್ಷಿಪ್ರ ಸ್ಪಂದನ ತಂಡ {Rapid Response Teams (RRT)} ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br>7. ಕಾಡಾನೆಗಳು ಕೃಷಿ ಜಮೀನುಗಳು ಮತ್ತು ವಸತಿ ಪ್ರದೇಶಗಳಲ್ಲಿ ಕಾಣಿಸಿಕೊಂಡಾಗ ಕಾಡಾನೆಗಳ ಮಾಹಿತಿಯನ್ನು ವಿನಿಮಯಿಸಲು/ ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿ, ಸಹಾಯವಾಣಿ ಸಂಖ್ಯೆ 1926ನ್ನು ಅನುಷ್ಠಾನಗೊಳಿಸಲಾಗಿದೆ.<br>8. ಕಾಡಾನೆ ಇರುವಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆನೆಗಳ ಚಲನ-ವಲನದ ಬಗ್ಗೆ ದೊಡ್ಡಗಾತ್ರದ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.<br>9. ಮಡಿಕೇರಿ ಜಿಲ್ಲೆ ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿ ಆನೆಚಲನ ವಲನಗಳ ಬಗ್ಗೆ ನಿಗಾ ವಹಿಸಲು ಹಾಗೂ ಇದರ ಮಾಹಿತಿ ಜನರಿಗೆ ಸಂವಹನ ಮಾಡಲು ಆನೆಗಳ ಗುಂಪಿನ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ರೇಡಿಯೋ ಕಾಲರ್ ಅಳವಡಿಸಲಾಗಿದೆ. ಇಲ್ಲಿಯವರೆಗೆ ಮಡಿಕೇರಿ ಜಿಲ್ಲೆಯಲ್ಲಿ 8 ಕಾಡಾನೆಗಳಿಗೆ ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ 4 ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗಿದೆ.<br>10. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಕಳುಹಿಸಲಾಗಿರುತ್ತದೆ. 2016-17ರಿಂದ ಇಲ್ಲಿಯವರೆಗೆ 23 ಪುಂಡಾನೆಗಳನ್ನು ಸೆರೆ ಹಿಡಿದು ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.<br>11. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ನಿಯಮಾನುಸಾರ ಪರಿಶೀಲಿಸಿ, ಆಧ್ಯತೆ ಮೇರೆಗೆ ನೇರವಾಗಿ ಸಂತ್ರಸ್ಥರ ಖಾತೆಗೆ ದಯಾತ್ಮಕ ಧನವನ್ನು ಪಾವತಿಸುವ ಪ್ರಕ್ರಿಯೆಯನ್ನು **ಇ-ಪರಿಹಾರ ತಂತ್ರಾಂಶದ** ಮೂಲಕ ನಿರ್ವಹಿಸಲಾಗುತ್ತಿದೆ.<br><br>ವನ್ಯಪ್ರಾಣಿ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 03.08.2011 ರನ್ವಯ ರೂ.5.00 ಲಕ್ಷಗಳನ್ನು ಮೃತಪಟ್ಟ ವಾರಸುದಾರರಿಗೆ ಪಾವತಿಸಲಾಗುತಿತ್ತು, ಇದೀಗ ಸರ್ಕಾರದ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ: 07.01.2020 ರನ್ವಯ ವನ್ಯಪ್ರಾಣಿಗಳಿಂದ ಮೃತಪಟ್ಟಿರುವ ವ್ಯಕ್ತಿಯ ವಾರಸುದಾರರಿಗೆ ರೂ.7,50,000/- ಗಳ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.<br>ಅಲ್ಲದೇ, ಸರ್ಕಾರಿ ಆದೇಶ ಸಂಖ್ಯೆ: ಅಪಜೀ 61 ಎಫ್‌ಎಪಿ 2018, ದಿನಾಂಕ: 16.10.2018 ರನ್ವಯ ವನ್ಯಜೀವಿಗಳ ದಾಳಿಯಿಂದ ಮೃತಪಟ್ಟ ಕುಟುಂಬದ ವಾರಸುದಾರರಿಗೆ 05 ವರ್ಷಗಳವರೆಗೆ ರೂ. 2,000/-ಗಳ ಮಾಸಾಶನವನ್ನು ಸಹ ನೀಡಲಾಗುತ್ತಿದೆ. ವಿವಿಧ ವನ್ಯಪ್ರಾಣಿಗಳಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಪಾವತಿಸಿದ ದಯಾತ್ಮಕ ಧನದ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ |

| | | |
|---|---|---|
| (ಇ) | ಕಳೆದ ಎರಡು ವರ್ಷಗಳಲ್ಲಿ ಕಾಡುಪ್ರಾಣಿಗಳಿಂದ ಹಾನಿಗೊಳಗಾದ ರೈತರ ಬೆಳೆಗಳಿಗೆ ನೀಡಿದ ಪರಿಹಾರವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು); | ಕಳೆದ ಎರಡು ವರ್ಷಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆಹಾನಿ ಪ್ರಕರಣಗಳಿಗೆ ಪಾವತಿಸಲಾದ ದಯಾತ್ಮಕ ಧನದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| (ಈ) | ಕಾಡುಪ್ರಾಣಿಗಳು ನಾಡಿಗೆ ಬರದೆ ಇರುವಂತೆ ತಡೆಯಲು ಕಾಡಿನಲ್ಲೇ ಯಥೇಚ್ಛ ಆಹಾರ ವಸ್ತುಗಳು ಕಾಡುಪ್ರಾಣಿಗಳಿಗೆ ದೊರೆಯುವಂತೆ ಮಾಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ; | ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ಹಣ್ಣು-ಹಂಪಲು, ಗಿಡ-ಮರಗಳನ್ನು ಬೆಳೆಸಲಾಗುತ್ತಿದೆ ಮತ್ತು ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ, ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಲ್ಲಿ ರೂ. 5.00 ಕೋಟಿ ವೆಚ್ಚದಲ್ಲಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳ ನಿರ್ಮೂಲನೆ ಎಂಬ ಹೊಸ ಕಾರ್ಯಕ್ರಮ / ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. |
| (ಉ) | ಕಾಡುಪ್ರಾಣಿಗಳ ದಾಳಿಯಿಂದ ರಕ್ಷಿಸಲು ಕಾಡಿನಂಚಿನ ಗ್ರಾಮಗಳನ್ನು ಸ್ಥಳಾಂತರಿಸುವ ಕುರಿತು ಸರ್ಕಾರದ ನಿಲುವೇನು? | ಕಾಡಂಚಿನ ನೂರಾರು ಗ್ರಾಮಗಳು ವನ್ಯಪ್ರಾಣಿಗಳ ಹಾವಳಿಗೆ ಒಳಗಾಗುತ್ತಿರುತ್ತದೆ. ಈ ಪೈಕಿ ಕೆಲವು ಗ್ರಾಮಗಳಲ್ಲಿನ ಕುಟುಂಬಗಳನ್ನು ಸ್ಥಳಾಂತರಿಸಲು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 96 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಆನಂದ್ ಸಿಂಗ್.
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

**ಪ್ರಶ್ನೆ ಸಂಖ್ಯೆ: 1824 (2089)ರ ಉಪ ಪ್ರಶ್ನೆ ಸಂಖ್ಯೆ: (ಅ) ಹಾಗೂ (ಆ) ಗೆ ಅನುಬಂಧ– 1.**

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ವಿಭಾಗ / ಜಿಲ್ಲೆ | 2017–18 | | 2018–19 | | 2019–20* (20 ಮಾರ್ಚ್ 2020ರ ವರೆಗೆ) | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1. | ರಾಮನಗರ | 2 (ಆನೆ)<br>1 (ಚಿರತೆ)<br>1 (ಕರಡಿ) | 20.00 | 1 (ಆನೆ) | 5.00 | 2 (ಆನೆ) | 10.00 |
| 2. | ಬೆಂಗಳೂರು ಗ್ರಾ | – | – | – | – | 1 (ಆನೆ) | 5.00 |
| 3. | ಬನ್ನೇರುಘಟ್ಟ | 3 (ಆನೆ) | 15.00 | – | – | 1 (ಆನೆ) | 7.50 |
| 4. | ಕೋಲಾರ | 2 (ಚಿರತೆ) | 10.00 | 1 (ಆನೆ) | 5.00 | 3 (ಆನೆ) | 22.50* |
| 5. | ಚಿತ್ರದುರ್ಗ | 2 (ಆನೆ) | 10.00 | – | – | 1 (ಕರಡಿ) | 5.00 |
| 6. | ಬಿ.ಆರ್.ಟಿ | 1 (ಆನೆ) | 5.00 | 3 (ಆನೆ) | – | 1 (ಆನೆ) | – |
| 7. | ಕಾವೇರಿ | – | – | 1 (ಆನೆ) | 5.00 | 1 (ಆನೆ) | 5.00 |
| 8. | ಮಲೈ ಮಹದೇಶ್ವರ | – | – | 1 (ಆನೆ) | 5.00 | 4 (ಆನೆ) | 20.00 |
| 9. | ಚಿಕ್ಕಮಗಳೂರು | 1 (ಕಾಡುಕೋಣ) | – | 2 (ಆನೆ) | 10.00 | 2 (ಆನೆ)<br>1 (ಕಾಡುಹಂದಿ) | 15.00 |
| 10. | ಕೊಪ್ಪ | – | – | 1 (ಕಾಡುಕೋಣ) | 5.00 | 1 (ಕಾಡುಕೋಣ) | 5.00 |
| 11. | ಬಂಡೀಪುರ | 1 (ಆನೆ) | 5.00 | 1 (ಆನೆ) | 5.00 | 3 (ಆನೆ)<br>2 (ಹುಲಿ) | 27.50* |
| 12. | ನಾಗರಹೊಳೆ | – | – | 1 (ಆನೆ)<br>(3 ಹುಲಿ) | 20.00 | – | – |
| 13. | ಹಾಸನ | 5 (ಆನೆ) | 25.00 | 1 (ಆನೆ) | 5.00 | 3 (ಆನೆ) | 15.00 |
| 14. | ತುಮಕೂರು | 1 (ಕರಡಿ) | 5.00 | 1 (ಕರಡಿ) | 5.00 | 1 (ಆನೆ)<br>4 (ಚಿರತೆ) | 32.50* |
| 15. | ಮಡಿಕೇರಿ | 3 (ಆನೆ) | 15.00 | – | – | 2 (ಆನೆ) | 12.50 |
| 16. | ಮಡಿಕೇರಿ ವಜೀ | – | – | – | – | 1 (ಆನೆ) | 5.00 |
| 17. | ವಿರಾಜಪೇಟೆ | 2 (ಆನೆ) | 10.00 | – | – | – | – |
| 18. | ಮೈಸೂರು | – | – | – | – | 1 (ಆನೆ) | 5.00 |
| 19. | ಮಂಡ್ಯ | – | – | 1 (ಮೊಸಳೆ) | 5.00 | | |
| 20. | ಭದ್ರಾವತಿ | 3 (ಆನೆ)<br>(1 ಕರಡಿ) | 20.00 | – | – | – | – |
| 21. | ಹಳಿಯಾಳ | 1 (ಮೊಸಳೆ)<br>1 (ಕರಡಿ) | 10.00 | – | – | – | – |
| 22. | ವಿಜಯಪುರ | 1 (ಮೊಸಳೆ) | 5.00 | 1 (ಮೊಸಳೆ) | 5.00 | – | – |
| 23. | ಯಲ್ಲಾಪುರ | 1 (ಕರಡಿ) | 5.00 | – | – | – | – |
| 24. | ಚಿಕ್ಕಬಳ್ಳಾಪುರ | 1 (ಕರಡಿ) | 5.00 | – | – | – | – |
| 25. | ಬೀದರ್ | 1 (ಕಾಡುಹಂದಿ) | 5.00 | – | – | 1 (ಕರಡಿ) | 7.50 |
| 26. | ಬಾಗಲಕೋಟೆ | – | – | 1 (ಮೊಸಳೆ) | 5.00 | 1 (ಮೊಸಳೆ) | 5.00 |
| 27. | ಬೆಳಗಾವಿ | – | – | 1 (ಕರಡಿ) | 5.00 | – | – |
| 28. | ಬಳ್ಳಾರಿ | – | – | 3 (ಚಿರತೆ) | 15.00 | 1 (ಕರಡಿ)<br>1 (ಮೊಸಳೆ) | 12.50 |
| 29. | ಕುಂದಾಪುರ | – | – | 1 (ಕಾಡುಹಂದಿ) | 5.00 | 2 (ಕಾಡುಕೋಣ) | 10.00 |
| 30. | ಕಲಬುರಗಿ | – | – | 1 (ಕಾಡುಹಂದಿ) | 5.00 | 1 (ಕಾಡುಹಂದಿ) | 5.00 |
| 31. | ಯಾದಗಿರಿ | – | – | – | – | 1 (ಮೊಸಳೆ) | 5.00 |
| 32. | ರಾಯಚೂರು | – | – | – | – | 1 (ನರಿ) | 7.50 |
| | ಒಟ್ಟು | 35 | 170.00 | 26 | 130.00 | 44 | 245.00 |

* ಸರ್ಕಾರದ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ:07.01.2020ರಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಮೃತಪಟ್ಟಿರುವ ವ್ಯಕ್ತಿಯ ವಾರಸುದಾರರಿಗೆ ಪಾವತಿಸುತ್ತಿರುವ ದಯಾತ್ಮಕ ಧನವನ್ನು ರೂ. 5,00,000/– ಗಳಿಂದ ರೂ.7,50,000/– ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಅದರಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.

ಪ್ರಶ್ನೆ ಸಂಖ್ಯೆ: 1824 (2089)ರ ಉಪ ಪ್ರಶ್ನೆ ಸಂಖ್ಯೆ: (ಇ)ಗೆ ಅನುಬಂಧ- 2

| ಕ್ರಸಂ | ಜಿಲ್ಲೆ / ವಿಭಾಗ | 2017-18 | | 2018-19 | | 2019-20 (ಫೆಬ್ರವರಿ 2020ರ ವರೆಗೆ) | |
|---|---|---|---|---|---|---|---|
| | | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1. | ರಾಮನಗರ | 2471 | 1,15,20,777.00 | 1152 | 64,81,575.00 | 128 | 6,11,131.00 |
| 2. | ಬೆಂಗಳೂರು ನಗರ | 29 | 2,30,000.00 | 17 | 1,90,000.00 | 0 | 0 |
| 3. | ಬೆಂಗಳೂರು ಗ್ರಾ | 543 | 48,40,844.00 | 49 | 9,75,000.00 | 6 | 0 |
| 4. | ಬನ್ನೇರುಘಟ್ಟ ರಾ.ಉ | 781 | 26,34,280.00 | 545 | 19,77,271.00 | 184 | 8,62,565.00 |
| 5. | ಕೋಲಾರ | 509 | 39,51,800.00 | 132 | 15,94,716.00 | 158 | 18,56,652.00 |
| 6. | ಚಿಕ್ಕಬಳ್ಳಾಪುರ | 17 | 1,47,000.00 | 5 | 57,154.00 | 0 | 0 |
| 7. | ಬಾಗಲಕೋಟೆ | 1 | 10,000.00 | 0 | 0 | 0 | 0 |
| 8. | ಬೆಳಗಾವಿ | 697 | 60,11,849.00 | 1250 | 50,76,000.00 | 378 | 17,57,700.00 |
| 9. | ಗೋಕಾಕ್ | 1 | 20,000.00 | 0 | 0 | 0 | 0 |
| 10. | ಬಳ್ಳಾರಿ | 139 | 4,42,590.00 | 119 | 5,71,425.00 | 49 | 1,55,485.00 |
| 11. | ಚಿತ್ರದುರ್ಗ | 92 | 17,98,884.00 | 21 | 1,21,023.00 | 1 | 13,670.00 |
| 12. | ದಾವಣಗೆರೆ | 340 | 13,33,425.00 | 38 | 2,25,000.00 | 0 | 0 |
| 13. | ಕೊಪ್ಪಳ | 0 | 0 | 2 | 3,100.00 | 0 | 0 |
| 14. | ಬಿ.ಆರ್.ಟಿ ವಿಜೀ | 126 | 6,48,234.00 | 202 | 12,12,973.00 | 123 | 9,02,835.00 |
| 15. | ಕಾವೇರಿ ವಜೀ | 1240 | 53,10,611.00 | 624 | 25,35,367.00 | 299 | 13,67,557.00 |
| 16. | ಮಲೈ ಮಹದೇಶ್ವರ ವಜೀ | 202 | 19,31,016.00 | 95 | 7,72,515.00 | 102 | 8,62,466.00 |
| 17. | ಭದ್ರಾ ವಜೀ | 43 | 4,68,000.00 | 66 | 7,69,000.00 | 48 | 5,90,000.00 |
| 18. | ಚಿಕ್ಕಮಗಳೂರು | 1759 | 1,05,59,059.00 | 637 | 47,90,315.00 | 410 | 30,54,000.00 |
| 19. | ಕೊಪ್ಪ | 144 | 11,95,850.00 | 158 | 15,79,714.00 | 73 | 5,73,475.00 |
| 20. | ಧಾರವಾಡ | 157 | 9,92,000.00 | 199 | 9,50,000.00 | 72 | 11,50,000.00 |
| 21. | ಗದಗ | 1330 | 22,65,000.00 | 537 | 11,43,000.00 | 285 | 5,23,688.00 |
| 22. | ಹಾವೇರಿ | 537 | 11,05,000.00 | 584 | 11,10,000.00 | 383 | 13,09,611.00 |
| 23. | ರಾಣೇಬೆನ್ನೂರು ವಜೀ | 1052 | 38,50,000.00 | 0 | 0 | 0 | 0 |
| 24. | ಬಂಡೀಪುರ | 1542 | 45,87,594.00 | 1323 | 43,89,859.00 | 891 | 31,74,488.00 |
| 25. | ನಾಗರಹೊಳೆ | 447 | 25,18,000.00 | 1197 | 62,68,916.00 | 285 | 14,87,898.00 |
| 26. | ಬೀದರ್ | 234 | 10,82,000.00 | 186 | 11,40,000.00 | 32 | 1,76,200.00 |
| 27. | ಕಲುಬರಗಿ | 20 | 95,065.00 | 7 | 34,865.00 | 0 | 0 |
| 28. | ಯಾದಗಿರಿ | 50 | 1,79,000.00 | 0 | 0 | 0 | 0 |

| | | | | | | | |
|---|---|---|---|---|---|---|---|
| 29. | ದಾಂಡೇಲಿ | 71 | 3.71.878.00 | 60 | 2.60.000.00 | 0 | 0 |
| 30. | ಹಳಿಯಾಳ | 506 | 16.26.578.00 | 309 | 11.55.135.00 | 40 | 2.03.300.00 |
| 31. | ಹೊನ್ನಾವರ | 2 | 47.400.00 | 0 | 0 | 0 | 0 |
| 32. | ಕಾರವಾರ | 0 | 0 | 12 | 84.040.00 | 0 | 0 |
| 33. | ಶಿರಸಿ | 168 | 6.17.000.00 | 262 | 10.00.000.00 | 44 | 2.13.356.00 |
| 34. | ಯಲ್ಲಾಪುರ | 347 | 31.67,363.00 | 184 | 14,11.297.00 | 125 | 10,16,250.00 |
| 35. | ಹಾಸನ | 3018 | 1,51,71,939.00 | 1353 | 71,09,654.00 | 1439 | 84,24,946.00 |
| 36. | ತುಮಕೂರು | 824 | 36,47,363.00 | 405 | 24,04,400.00 | 75 | 4,78,527.00 |
| 37. | ಮಡಿಕೇರಿ | 1492 | 73,84,156.00 | 681 | 34,96,672.00 | 528 | 25,61,450.00 |
| 38. | ವಿರಾಜಪೇಟೆ | 1707 | 1,04,17,453.00 | 989 | 60,14,454.00 | 630 | 34,11,778.00 |
| 39. | ಮಡಿಕೇರಿ ವಜೀ | 615 | 28,45,248.00 | 641 | 37,36,030.00 | 308 | 17,68,560.00 |
| 40. | ಕುದುರೆಮುಖ ವಜೀ | 129 | 10,24,965.00 | 131 | 8,01,979.00 | 28 | 1,90,790.00 |
| 41. | ಕುಂದಾಪುರ | 461 | 22,15,495.00 | 274 | 15,87,648.00 | 96 | 5,46,475.00 |
| 42. | ಮಂಗಳೂರು | 76 | 10,10,074.00 | 74 | 8,29,500.00 | 55 | 8,05,052.00 |
| 43. | ಹುಣಸೂರು | 243 | 11,28,373.00 | 56 | 2,38,216.00 | 119 | 6,63,665.00 |
| 44. | ಮಂಡ್ಯ | 125 | 11,66,918.00 | 38 | 2,93,750.00 | 62 | 4,02,801.00 |
| 45. | ಮೈಸೂರು | 1996 | 63,47,916.00 | 793 | 24,72,210.00 | 231 | 11,67,512.00 |
| 46. | ಮೈಸೂರು ವಜೀ | 16 | 86,820.00 | 2 | 6,500.00 | 0 | 0 |
| 47. | ಭದ್ರಾವತಿ | 754 | 73,84,635.00 | 561 | 36,23,503.00 | 215 | 13,01,732.00 |
| 48. | ಸಾಗರ | 54 | 5,37,548.00 | 100 | 7,44,230.00 | 15 | 1,44,724.00 |
| 49. | ಶಿವಮೊಗ್ಗ | 328 | 8,86,342.00 | 408 | 15,49,432.00 | 26 | 1,75,660.00 |
| 50. | ಶಿವಮೊಗ್ಗ ವಜೀ | 90 | 2,03,248.00 | 76 | 4,29,885.00 | 8 | 38,000.00 |
| | **ಒಟ್ಟು** | **27,525** | **13,70,16,590.00** | **16,185** | **8,18,02,188.00** | **7,951** | **4,39,99,937.00** |